ಮೌಲ್ಯಮಾಪನ ಕಾರ್ಯ ಪೂರ್ಣಗೊಳಿಸಲು ಹೆಚ್ಚು ಕಾಲಾವಕಾಶ ಬೇಕಾಯಿತು. ಆದರೂ ಫಲಿತಾಂಶ ಪ್ರಕಟಣೆ, ಮಾರ್ಕ್ಸ್ ಕಾರ್ಡ್ ನೀಡುವಿಕೆ ಮತ್ತು ಸಂಬಂಧಿಸಿದ ಇತರೆ ಪ್ರಕ್ರಿಯೆಗಳನ್ನು ಕ್ಲುಪ್ತ ಸಮಯದಲ್ಲೇ ಮಾಡಲಾಗಿದೆ.

ಇ) ಪರೀಕ್ಷಾ ಕಾರ್ಯದಲ್ಲಿ ಯಾವುದೇ ರೀತಿಯ ವಿಳಂಬವಾಗಿರುವುದಿಲ್ಲ.

ಈ) ಗಣಿತ ವಿಷಯದಲ್ಲಿ 1995 ರಲ್ಲಿ ಶೇಕಡಾ 38.96 ರಷ್ಟು ಫಲಿತಾಂಶವಿದ್ದು, 1996 ರ ಪರೀಕ್ಷೆಯಲ್ಲಿ ಶೇಕಡಾ 29.98 ರಷ್ಟು ಫಲಿತಾಂವಿದೆ. ಕಳೆದ ಸಾಲಿಗೂ ಈ ಸಾಲಿಗೂ ಶೇಕಡಾ 4 ರಷ್ಟು ವ್ಯತ್ಯಾಸವಿದ್ದು ವಿದ್ಯಾರ್ಥಿಗಳ ಗುಣಮಟ್ಟದಲ್ಲಿ ಸ್ವಲ್ಪ ಮಟ್ಟಿಗೆ ಇಳಿಮುಖ ಕಂಡು ಬಂದಿದ್ದು ಮೌಲ್ಯಮಾಪನ ಕಾರ್ಯದಲ್ಲಿ ಯಾವುದೇ ಲೋಪ ದೋಷಗಳಿರುವುದು ಕಂಡು ಬಂದಿರುವುದಿಲ್ಲ.

ವಿಷಯ :- ಆಂಗ್ಲ ಮಾಧ್ಯಮ ಶಾಲೆಗಳ ಸಂಖ್ಯೆಯನ್ನು ಕಡಿಮೆ ಮಾಡುವ ಬಗ್ಗೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 758 (968)

ಶ್ರೀ ಕುಂಭೆ ಸುಂದರರಾವ್, (ಸುರತ್ಕಲ್) :- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಸಿ.ಬಿ.ಎಸ್.ಇ. ಸ್ಕೀಮ್ ಅನ್ವಯ ಶಾಲೆಗಳನ್ನು ಪ್ರಾರಂಭಿಸಲು ಮಾನದಂಡಗಳೇನು;

ಆ) ರಾಜ್ಯ ಸರ್ಕಾರದಿಂದ ಎನ್.ಒ.ಸಿ. ಪಡೆದುಕೊಂಡು ರಾಜ್ಯದಾದ್ಯಂತ ಹಬ್ಬುತ್ತಿರುವ ಇಂಥ ಇಂಗ್ಲೀಷ್ ಮಾಧ್ಯಮ ಶಾಲೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಸರಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :-

ಅ) ಸಂಖ್ಯೆ ಇಡಿ. 258 ಪಿಜಿಸಿ : 89 ದಿನಾಂಕ 5-7-89 ರಲ್ಲಿನ ಅಧಿಕೃತ ಜ್ಞಾಪನದಲ್ಲಿ ವಿಧಿಸಿರುವ ಷರತ್ತುಗಳನ್ನು ಹಾಗೂ ನಿಬಂಧನೆಗಳನ್ನು ಪಾಲಿಸಲಾಗುತ್ತಿದೆ.

1. 1 ರಿಂದ 7 ನೇ ತರಗತಿಯವರೆಗೆ ಆಧಿಕೃತವಾಗಿ ಶಾಲೆಯನ್ನು ನಡೆಸುವಂತಹ ಸಂಸ್ಥೆಯಾಗಿರಬೇಕು.
2. ಪ್ರತಿ ವರ್ಷವೂ ಮಾನ್ಯತೆಯನ್ನು ನವೀಕರಿಸಿಕೊಳ್ಳುತ್ತಿರುವ ಸಂಸ್ಥೆಯ ಶಾಲೆಗಳು ಸಂಯೋಜನೆ ಪಡೆಯಲು ಅರ್ಹತೆ ಪಡೆದಿರುತ್ತದೆ.
3. ಶಿಕ್ಷಣ ಮಾಧ್ಯಮವು ಆಂಗ್ಲ ಭಾಷೆಯಲ್ಲಿರಬೇಕು.
4. ಪ್ರಾಂಶುಪಾಲರು ಸ್ನಾತಕೋತ್ತರ ಪದವೀಧರರಾಗಿರಬೇಕು.

5. ಮುಖ್ಯ ಶಿಕ್ಷಕರು ಬಿ.ಇಡಿ., ಪದವೀಧರರಾಗಿರಬೇಕು.

6. ಶಿಕ್ಷಕರುಗಳಿಗೆ ಪ್ರಾವಿಡೆಂಟ್ ಫಂಡ್ ನಿವೃತ್ತಿ ಯೋಜನೆಗೆ ಅವಕಾಶ ಕಲ್ಪಿಸಿರಬೇಕು.

7. ರಾಜ್ಯದಿಂದ ರಾಜ್ಯಕ್ಕೆ ವರ್ಗಾವಣೆಗೆ ಬದ್ಧರಾದ ಅಖಿಲ ಭಾರತದ ಸೇವೆ, ಕೇಂದ್ರ ಸರ್ಕಾರದ ಸೇವೆ ಮತ್ತು ಕೇಂದ್ರ ಸರ್ಕಾರದ ಉದ್ದಿಮೆಗಳಿಗೆ ಸೇರಿದ ಪೋಷಕರ ಮಕ್ಕಳು ಇದ್ದಲ್ಲಿ (ಇದನ್ನು ಪುಷ್ಟೀಕರಿಸಲು ಸಂಬಂಧಪಟ್ಟ ಇಲಾಖೆ ಸಂಸ್ಥೆಗಳಿಂದ ದೃಢೀಕರಣ ಪತ್ರ ಸಲ್ಲಿಸುವುದು).

9. ಸಂಬಂಧಪಟ್ಟ ಉಪ ನಿರ್ದೇಶಕರು ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಪರಿಶೀಲಿಸಿ ಶಿಫಾರಸ್ಸು ಮಾಡಿದ ಪಕ್ಷದಲ್ಲಿ ಪರಿಗಣಿಸಲಾಗುವುದು.

ಆ) ದಿನಾಂಕ 5-7-89 ರ ಅಧಿಕೃತ ಜ್ಞಾಪನದಲ್ಲಿನ ಮಾನದಂಡಗಳನ್ನು ಕಟ್ಟು ನಿಟ್ಟಾಗಿ ಅನುಸರಿಸುತ್ತಿರುವುದರಿಂದ ಪ್ರಸ್ತಾವನೆಗಳ ಸಂಖ್ಯೆ ತಾನಾಗಿಯೇ ಕಡಿಮೆಯಾಗುತ್ತದೆ.

ವಿಷಯ :- ಕುಂದಾಪುರ ತಾಲ್ಲೂಕಿನಲ್ಲಿ ಅರಣ್ಯಗಳಿಂದ ಬಿದ್ದ ಮರಗಳನ್ನು ಕಡಿದು ಡಿಪೋಗೆ ಸಾಗಾಣಿಕೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 762 (1522)

ಶ್ರೀ ಕೆ. ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ) :- ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕುಂದಾಪುರ ತಾಲ್ಲೂಕಿನಲ್ಲಿ ಯಾವ ಅರಣ್ಯಗಳಿಂದ ಬಿದ್ದ ಮರಗಳನ್ನು ಕಡಿದು ಯಾವ ಡಿಪೋಗೆ ಸಾಗಿಸಲಾಗಿದೆ (ಮೀಟರ್‌ಗಳಲ್ಲಿ ತಿಳಿಸುವುದು)

ಆ) ಯಾವ ಅರಣ್ಯದಿಂದ ಆರಿಸಿ ಕಡಿದ ಮರಗಳನ್ನು ಯಾವ ಡಿಪೋಗೆ ಸಾಗಿಸಲಾಗಿದೆ? (ಮೀಟರ್‌ಗಳಲ್ಲಿ ತಿಳಿಸುವುದು)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :-

ಅ) ಕುಂದಾಪುರ ತಾಲ್ಲೂಕಿನಲ್ಲಿ ಕಳೆದ 3 ವರ್ಷಗಳಲ್ಲಿ ಅರಣ್ಯಗಳಲ್ಲಿ ಬಿದ್ದ ಮರಗಳನ್ನು ಕಡಿದರೆ ಈ ಕೆಳಕಂಡ ಡಿಪೋಗಳಿಗೆ ಸಾಗಿಸಲಾಗಿದೆ.